ಅಂತಲ್ಲ. ಮಹಿಳೆಯರ ಮೇಲೆ ಹೇರಲಾದ ಸಾಮಾಜಿಕ ನಿರೀಕ್ಷೆ ಸಾಮಾನ್ಯವಾಗಿ ಅವರ ಪಾತ್ರಗಳನ್ನು ಸಾಂಪ್ರದಾಯಿಕ ಗಡಿಗಳವರೆಗೆ ತಂದು ನಿಲ್ಲಿಸುತ್ತದೆ. ಇದರ ಹೊರತಾಗಿಯೂ, ತಳಮಟ್ಟದ ಹೋರಾಟಗಳು ಮತ್ತು ವಿವಿಧ ಕ್ಷೇತ್ರಗಳಲ್ಲಿ ಹೆಚ್ಚುತ್ತಿರುವ ಮಹಿಳಾ ಪ್ರಾತಿನಿಧ್ಯವು ಹೆಚ್ಚಿನ ಬದಲಾವಣೆಗಳನ್ನು ಸೂಚಿಸುತ್ತದೆ. ಒಂದು ಕಾಲದಲ್ಲಿ ಮುಕ್ತವಾಗಿದ್ದು ಮತ್ತೆ ನಿರ್ಬಂಧಿಸಲ್ಪಟ್ಟ ಮಹಿಳೆಯರ ಧ್ವನಿಗಳು ಈಗ ಸಮ ಸಮಾಜವನ್ನು ರೂಪಿಸುವ ಪ್ರತಿಧ್ವನಿಗಳಾಗಿ ಮಾರ್ಪಟ್ಟಿವೆ ಮತ್ತು ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿವೆ.

◆ **ನಿಮ್ಮಲ್ಲಿ ಈಗಲೂ 'ರಾಮಾಯಣ ಸಪ್ತಾಹ' ನಡೆಯುತ್ತದೆ. ಇದೊಂದು ರಾಷ್ಟ್ರೀಯ ಆಚರಣೆಯಾಗಿ, ರಾಮಾಯಣ ಜಾನಪದ ನಾಟ್ಯ ರೂಪಗಳ ಪ್ರದರ್ಶನವೇ ಜರುಗುತ್ತದೆ. ಮುಸ್ಲಿಂ ಮೆಜಾರಿಟಿ ಇರುವ ಇಡೀ ದೇಶವೇ ಇದನ್ನು ಸಂಭ್ರಮದಿಂದ ಆಚರಿಸುತ್ತದೆ. ಇದರ ಕುರಿತು ಸ್ವಲ್ಪ ಹೇಳಿ...**

ನಮ್ಮದು ಮುಸ್ಲಿಂ ಬಹುಸಂಖ್ಯಾತ ರಾಷ್ಟ್ರವಾಗಿದ್ದರೂ ಸಹ, ರಾಮಾಯಣದಂತಹ ಸಾಂಸ್ಕೃತಿಕ ಕಥನಗಳಲ್ಲಿ ಸಾರ್ವತ್ರಿಕವಾಗಿ ಪ್ರತಿಧ್ವನಿಧಿಸಲ್ಪಡುವ ಪ್ರೇಮ, ಕರ್ತವ್ಯ ಮತ್ತು ನೈತಿಕತೆಯಂತಹ ವಸ್ತುವಿಷಯಗಳು ವಿವಿಧ ಹಿನ್ನೆಲೆಯ ಜನರನ್ನು ಆಕರ್ಷಿಸುತ್ತವೆ ಮತ್ತು ಇಲ್ಲಿ ಬರುವ ಪ್ರಮುಖ ಪಾತ್ರಗಳು ಬಾಲಿ (ವಾಲಿ), ಸುಗ್ರೀವ, ಹನುಮಂತ ಯಾರನ್ನೇ ತಗೊಳ್ಳಿ, ಬಹುತೇಕ ಪಾತ್ರಗಳು ಬುಡಕಟ್ಟು ಸಮುದಾಯದ ಪ್ರತಿನಿಧಿಗಳಾಗಿವೆ. ನಮ್ಮದು ಬುಡಕಟ್ಟು ರಾಮಾಯಣ. ಇಲ್ಲಿ ಸೀತೆ ಪತಿವ್ರತೆಯಾಗಿ ಉಳಿಯುವುದಿಲ್ಲ. ಅನಾಚಾರಕ್ಕೆ ಒಳಗಾಗುತ್ತಾಳೆ ಹಾಗೂ ಪಾತಿವ್ರತ್ಯದ ಕುರಿತು ಇರುವ ಗಂಡು ಅಹಮಿಕೆಯನ್ನೇ ಪ್ರಶ್ನಿಸುತ್ತಾಳೆ! ರಾಮಾಯಣ ಸಪ್ತಾಹವು ಧಾರ್ಮಿಕ ಗಡಿಗಳನ್ನು ಮೀರಿದ ಇಂಡೋನೇಷಿಯಾದ ಸಾಂಸ್ಕೃತಿಕ ಬಹುತ್ವಕ್ಕೆ ಸಾಕ್ಷಿಯಾಗಿದೆ. ಈ ಜಾನಪದ ಆಚರಣೆಯು ಸಮುದಾಯಗಳನ್ನು ಒಗ್ಗೂಡಿಸುವುದರ ಜೊತೆಗೆ ನಮ್ಮ ಅಸ್ಮಿತೆಯನ್ನು ಎತ್ತಿ ತೋರಿಸುತ್ತದೆ. ಏಕೆಂದರೆ ಇದು ಹಿಂದಿನ ಪೀಳಿಗೆಯ ಪರಂಪರೆಗೆ ಸಂಬಂಧಿಸಿದ್ದು. ತಲಾಂತರಗಳಿಂದ ನಡೆದು ಬಂದ ಆಚರಣಾ ಪದ್ಧತಿ. ಸಮಾಜದಲ್ಲಿ ಆಳವಾಗಿ ಬೇರೂರಿರುವ ಅಭ್ಯಾಸ ಎನ್ನಬಹುದು. ಈ ಸಾಂಸ್ಕೃತಿಕ ಆಚರಣೆಯು ಹೆಚ್ಚಿನ ಆಧ್ಯಾತ್ಮಿಕ ಮೌಲ್ಯವನ್ನು ಹೊಂದಿರುವುದಲ್ಲದೆ ನಮ್ಮಿಡೀ ಸಮುದಾಯಕ್ಕೆ ಮನರಂಜನೆಯನ್ನು ಸಹ ಒದಗಿಸುತ್ತದೆ. ಉತ್ಸವದ ಸುತ್ತಲಿನ ಉತ್ಸಾಹದ ಸಾಂಸ್ಕೃತಿಕ ಅಭಿವ್ಯಕ್ತಿಗಳು ನಮ್ಮನ್ನು ಒಗ್ಗೂಡಿಸಬಲ್ಲವು, ವೈವಿಧ್ಯತೆಯ ನಡುವೆ ಗೌರವ ಮತ್ತು ತಿಳಿವಳಿಕೆಯನ್ನು ಬೆಳೆಸಬಲ್ಲವು ಎಂಬ ಸಾಮಾಜಿಕ ಆಶಯ ಇದರ ಹಿಂದೆ ಕೆಲಸ ಮಾಡಿದೆ ಅನಿಸುತ್ತೆ. ಮತ್ತೆ ಜನರನ್ನು ಒಗ್ಗೂಡಿಸಲು ಏನಾದರೂಂದು ಬೇಕಲ್ಲ?

◆ **ಪದೇಪದೇ ನಿಮಗೆ ಬೀಳುವ ಕನಸು ಯಾವುದು ?**

ಗಾಳಿಯ ಲಯಕ್ಕೆ ತಕ್ಕಂತೆ ತೂಗಾಡುವ ಹಸಿರು ಭತ್ತದ ಗದ್ದೆಗಳಲ್ಲಿ ಗುರಿ ಇಲ್ಲದೆ ಅಲೆದಾಡುವ ಕನಸು ನನಗೆ ಆಗಾಗ ಬೀಳುತ್ತದೆ. ಬಹಳ ಸಲ ಈ ಕನಸುಗಳಲ್ಲಿ ನಾನು ನನ್ನ ಪೂರ್ವಜರನ್ನು ಭೇಟಿಯಾಗುತ್ತೇನೆ. ಸತ್ತವರ ಒಂದು ಲೋಕವಿದೆ. ಅದು ಕನಸಿನಲೋಕ.

ಅಲ್ಲಿ ಅಜ್ಜ, ಅಜ್ಜಿ, ನನ್ನ ಬಾಲ್ಯದ ಗೆಳತಿ, ಪ್ರೈಮರಿ ಸ್ಕೂಲು ಮೇಷ್ಟ್ರು ಎಲ್ಲರೂ ಇದ್ದಾರೆ.ನನ್ನ ಪ್ರೀತಿಯ ನಾಯಿಯೂ ಸಹ ಇದೆ. ನನ್ನ ಬಾಳಿನ ಕಗ್ಗಂಟುಗಳನ್ನು ಬಿಚ್ಚಲು ಬೇಕಾದ ತಿಳಿವಳಿಕೆ ಮತ್ತು ಅಪರೂಪದ ಎದೆಗಾರಿಕೆಯನ್ನು ನನಗವರು ಕೊಟ್ಟೇ ಕೊಡುತ್ತಾರೆ. ಈ ಭತ್ತದ ಗದ್ದೆಯ ಹಸಿರು ಕನಸು ನನ್ನ ಬೆನ್ನಹುರಿಯೊಂದಿಗೆ ಬೆಸೆದ ಆಳವಾದ ಸಂಬಂಧದ ಸಂಕೇತವಾಗಿದೆ ಅನ್ನೋದು ನನ್ನ ನಂಬಿಕೆ.

◆ **ನಿಮಗೆ ಭಯ ಹುಟ್ಟಿಸುವ ಸಂಗತಿ ಯಾವುದು?**

ನಾನು ಪ್ರೀತಿಸುವ ಜನರು ನನ್ನನ್ನು ತೊರೆದು ಹೋಗುತ್ತಾರೆ ಮತ್ತು ನಾನವರಿಂದ ದೂರವಾಗುತ್ತೇನೆ ಎಂಬ ಆಲೋಚನೆ ನನಗೆ ಬಹಳ ಭಯ ಹುಟ್ಟಿಸುತ್ತದೆ.

◆ **ನಿಮಗೆ ಒಪ್ಪಿಗೆ ಇದ್ದರೆ ನಿಮ್ಮ ಜೀವನದ ಒಂದು ಸಿಹಿ ಮತ್ತು ಕಹಿ ನೆನಪು ಹಂಚಿಕೊಳ್ಳಬಹುದಾ?**

ಮನ ಮೆಚ್ಚಿದ ಹುಡುಗನನ್ನು ಮದುವೆಯಾಗಿ ನನ್ನ ಮಗ ಹುಟ್ಟಿದ ಘಳಿಗೆ ನನ್ನ ಬದುಕಿನ ಅತ್ಯಂತ ಸಿಹಿ ಘಟನೆ. ಕಹಿ ನೆನಪಿನ ಬಗ್ಗೆ ಹೇಳಬೇಕೆಂದು ಅನಿಸುವ ಯಾವ ಕಹಿ ನೆನಪೂ ನನಗಿಲ್ಲ.

●